# ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಸೌರಶಾಖ (Solar Tunnel Dryer) ಘಟಕಕ್ಕೆ ಸಹಾಯಧನ ನೀಡಲು ಅನುಸರಿಸಬೇಕಾದ ಮಾರ್ಗಸೂಚಿ

2022-23 ನೇ ಸಾಲಿನ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ, ತೋಟಗಾರಿಕೆ ಬೆಳೆಗಳಾದ ಮೆಣಸಿನಕಾಯಿ, ಅಂಜೂರ, ದ್ರಾಕ್ಷಿ, ಶುಂಠಿ, ಲೋಳೆಸರ ಇತ್ಯಾದಿ ತೋಟಗಾರಿಕೆ ಬೆಳೆಗಳನ್ನು ಸೌರ ಶಾಖ (Solar Tunnel Dryer) ಘಟಕಗಳಲ್ಲಿ ಬಳಸಿ ಒಣಗಿಸಬಹುದಾಗಿರುತ್ತದೆ. ಇದರಿಂದ ಸಮಯ ಹಾಗೂ ಉತ್ತಮ ಗುಣಮಟ್ಟದ ಪದಾರ್ಥಗಳನ್ನು ಪಡೆಯಲು ಅನುಕೂಲವಾಗುತ್ತದೆ.

100 ಕೆ.ಜಿ. ಸಾಮರ್ಥ್ಯದ ಸೌರಶಾಖ ಘಟಕವನ್ನು ಸ್ಥಾಪಿಸಲು ಶೇ.40 ರಂತೆ ಗರಿಷ್ಠ ರೂ. 22,000/- ಗಳು ಹಾಗೂ 1000 ಕೆ.ಜಿ. ಸಾಮರ್ಥ್ಯದ ಸೌರಶಾಖ ಘಟಕವನ್ನು ಸ್ಥಾಪಿಸಲು ಗರಿಷ್ಠ ರೂ. 2,28,000/- ಗಳವರೆಗೆ ಸಹಾಯಧನ ನೀಡಲು ಅವಕಾಶವಿರುತ್ತದೆ.

## ತಾಂತ್ರಿಕ ವೈಶಿಷ್ಟತೆಗಳು:

AICRP on Post harvest Engineering & Technology ಕಾರ್ಯಕ್ರಮದಡಿ, ಸಂಸ್ಕರಣೆ ಹಾಗೂ ಆಹಾರ ತಾಂತ್ರಿಕ ವಿಭಾಗ, ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು ರವರು, ಅಭಿವೃದ್ಧಿಪಡಿಸಿರುವ 100 ಕೆ.ಜಿ. ಹಾಗೂ 1000 ಕೆ.ಜಿ. ಸಾಮರ್ಥ್ಯದ ಸೌರಶಾಖ ಘಟಕವನ್ನು ಸ್ಥಾಪಿಸಲು ರಾಜ್ಯದಲ್ಲಿಯೇ ಪ್ರಪ್ರಥಮವಾಗಿ ಸೌರಶಾಖಾ ಪೆಟ್ಟಿಗೆ (Solar Tunnel Dryer) ಘಟಕವನ್ನು ಸ್ಥಾಪಿಸಲು ಉದ್ದೇಶಿಸಲಾಗಿರುತ್ತದೆ.

ಈ ಕೆಳಗೆ ನೀಡಿರುವ ತಾಂತ್ರಿಕ ಅಂಶಗಳನ್ವಯ (Table-I & II) ಸೌರಶಾಖಾ ಪೆಟ್ಟಿಗೆ ಘಟಕವನ್ನು ಈ ಕಛೇರಿಯಿಂದ empanel ಮಾಡಲಾದ ತಯಾರಕರು / ಸರಬರಾಜುದಾರರು / ಫ್ಯಾಬ್ರಿಕೇಟರ್ಸ್ (Manufacturers / Suppliers / Fabricators) ರವರ ವತಿಯಿಂದಲೇ ಸದರಿ ಸೌರಶಾಖ (Solar Tunnel Dryer) ಘಟಕವನ್ನು ಕಡ್ಡಾಯವಾಗಿ ನಿರ್ಮಿಸಬೇಕಾಗಿರುತ್ತದೆ.

### Table-I Technical specification and estimate of Solar Tunnel Dryer (100 kg capacity)

Size of the Dryer (Length=1.2 m; Width=0.75 m; Height=2.0 m)

| Sl. No. | Particulars | Size | No. | Qty | Rate (Rs.) | Total (Rs.) |
|---|---|---|---|---|---|---|
| 1 | Square MS pipe | 32 x 32 x 3 mm | 38 m | 70.0 kg | 65.0 /kg | 4550 |
| 2 | Square MS Pipe | 25 x 25 x 3 mm | 24 m | 40.0 kg | 65.0 /kg | 2600 |
| 3 | Polycarbonate | 2 mm thick | 10 m² | | 800/m² | 8000 |
| 4 | MS flat | (25 x 3 mm) | - | 20 kg | 65.0/kg | 1300 |
| 5 | Turbo Ventilators | 200 mm dia | 01 | - | 2500 | 2500 |
| 6 | Trays (G.I) | 0.6 x 0.6 x 0.05 m | 10 | - | 500 | 5000 |

| | | | | | | |
|---|---|---|---|---|---|---|
| 7 | Electric panel board with, digital temp controller, on and off switches, contactors, thermocouples (1No.) | 150 x 150 mm | 01 | - | 6000 | |
| 8 | Exhaust fan | 150 mm dia with 0.125 kW | 01 | - | 2500 | 2500 |
| 9 | Blow hot air heater (with variable temperature adjustment) | 2000 watts | 01 | - | 2500 | 2500 |
| | | | | | Total | 34,950 |
| | Fabrication charges – 20 % | | | | | 6990 |
| | Installation charges – 10 % | | | | | 3500 |
| | Transportation charges | | | | | 7500 |
| | Wastage – 5 % | | | | | 1750 |
| | Insurance – 2 % | | | | | 700 |
| | | | | | Sub Total | 55390 |
| | | | | | Round off | 55000 |
| | Grand Total (+ Taxes as applicable ) | | | | | 55000 |

<u>Note:</u> Design enclosed in Annexure-1

**<u>Table- II</u> <u>Technical specification and estimate of Solar Tunnel Dryer (1000 kg capacity)</u>**

Size of the Dryer (Length=15 m; Width=3.75 m ; Height=3.0 m)

| Sl. No. | Particulars | Size | No. | Qty | Rate (Rs.) | Total (Rs.) |
|---|---|---|---|---|---|---|
| 1 | Concrete bed flat form (1:2:4) | 17 x 5 x 0.15 m | 01 | 12.75 $m^3$ | 5406.87/ $m^3$ | 68938 |
| 2 | CC foundation for poles | 0.45 x 0.45 x 0.45 m | 26 | 2.37 $m^3$ | 5406.87/ $m^3$ | 12810 |
| 3 | Foundation pipe (G.I) 42 mm dia and 3 mm thick | 0.6 m | 26 | 33.6 kg | 65.43/kg | 2198 |
| 4 | Column pipe (G.I) 36 mm dia and 3 mm thick | 1.2 m | 26 | 56.16 kg | 65.43/kg | 3675 |
| 5 | Door pipe (G.I) 36 mm dia | 2.2 m | 04 | 8.8 kg | 65.43/kg | 576 |

| | | | | | | |
|---|---|---|---|---|---|---|
| | and 3 mm thick | | | | | |
| | Arch pipes (G.I) 25 mm dia and 3 mm thick | 6.0 m | 11 | 106 kg | 65.43/kg | 6909 |
| 7 | Cross bar pipes (G.I) 25 mm dia and 3 mm thick | 18.0 m | | 28.8 kg | 65.43/kg | 1884 |
| 8 | Supporting MS angle between column pipes | (25 x 25 x 6 mm) 130 m | - | 260 kg | 65.0/kg | 16900 |
| 9 | MS angle frame for turbo ventilators | (37.5 x 37.5 x 6 m) 18 m | - | 63.0 kg | 65.0/kg | 4095 |
| 10 | MS flat for fixing turbo ventilators | (50 x 6 mm) 18 m | - | 36 kg | 65/kg | 2340 |
| 11 | HDPE-UV/ sheet | 200 micron | - | 180 $m^2$ | 50.74 /$m^2$ | 9133 |
| 12 | Shade net | 75 % shade | - | 180 $m^2$ | 20.045/ $m^2$ | 3608 |
| 13 | Aluminium Profiles | - | - | 150 m | 24.45/m | 3674 |
| 14 | Zigzag spring | - | - | 150 m | 9.5/m | 1425 |
| 15 | Self drilling screws | | 1000 | - | 1.583 | 1583 |
| 16 | Turbo Ventilators | 450 mm dia | 04 | - | 3750 each | 15000 |
| 17 | Doors (M.S) | 2 x 1 m | 02 | - | 2500 each | 5000 |
| 18 | Ventilators | 1 x 0.3 m | 02 | - | 1750 each | 3500 |
| 19 | Anti corrosive paint | - | - | 10 lit | 250/lit | 2500 |
| 20 | Blow hot air heater (with variable temperature adjustment) | 2000 watts | 04 | - | 2500 each | 10000 |
| 21 | Industrial exhaust fans (single phase, 250 watt and 1440 rpm) | 300 mm | 04 | - | 6000 each | 24000 |
| 22 | Electric panel board with cover, digital temp controller, on and off switches, MCB, contactors, J type thermocouples (2No.) | 300 x 300 x 200 mm | 01 | - | 10000 | 10000 |
| | | 25 x 25 x 3 | 06 | 520 kg | 65.0/kg | 33800 |

(35)

| | | | | | | |
|---|---|---|---|---|---|---|
| 23 | Racks (MS square pipe) | mm<br>32 x 32 x 3 mm | 36 | 216 kg | 65.0/kg | 14[illegible] |
| 24 | Trays (G.I) | 1.0 x 1.0 x 0.1 m | 96 | - | 1135 each | 1,08,960 |
| 25 | Solar power supply system (solar panel-1 kW, Inverter and battery for min 3.0 hours back up) | 1 kilowatt | 01 | - | 1,25,000 | 1,25,000 |
| | | | | | Total | 4,91,548 |
| | Fabrication charges – 5 % | | | | | 24,577 |
| | Installation charges – 5 % | | | | | 24,577 |
| | Transportation charges | | | | | 15,000 |
| | Wastage – 2 % | | | | | 9831 |
| | Insurance – 1 % | | | | | 4916 |
| | | | | | Sub Total | 570449 |
| | | | | | Rounded off | 570000 |
| | Grand Total (+ Taxes as applicable ) | | | | | 570000 |

**Note: Design enclosed in Annexure-II**

**ಫಲಾನುಭವಿಗಳ ಅರ್ಹತೆ:**

1. ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
2. ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸಿರನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
3. ಫಲಾನುಭವಿಯು ಸೌರಶಾಖ ಘಟಕಕ್ಕೆ ಕೇಂದ್ರ / ರಾಜ್ಯ ಸರ್ಕಾರದ ಇತರೆ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬ ದೃಢೀಕರಣ ಪತ್ರ ಪಡೆದುಕೊಳ್ಳಬೇಕು.

**ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ:-**



1. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿ ಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳೀಯ ಪತ್ರಿಕೆಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ/ತಾಲ್ಲೂಕು ತೋಟಗಾರಿಕೆ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.
2. ಪ್ರಕಟಣೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಜೇಷ್ಠತಾ ಪಟ್ಟಿಯನುಸಾರ ಪರಿಗಣಿಸುವ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದ್ದು.
3. **ರೈತರು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿಗಳ ಅಂತಿಮ ಪಟ್ಟಿ ಮಾಡಿ ಮೊದಲು ಅರ್ಜಿ ಸಲ್ಲಿಸಿದವರಿಗೆ ಆದ್ಯತೆ ನೀಡುವುದು.**
4. **ಆಸಕ್ತಿಯುಳ್ಳ ರೈತರು ಅರ್ಜಿಯನ್ನು ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ / ಸತೋನಿ ಕಛೇರಿಗೆ ಅಥವಾ ಆನ್ ಲೈನ್ ಮೂಲಕ FRUITS ತಂತ್ರಾಂಶದಲ್ಲಿ ಸಲ್ಲಿಸುವುದು.**
   a. ನಿಗಧಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿ ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ.
   b. ಪಹಣಿ (RTC) (ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು)
   c. ತಾಲ್ಲೂಕು ಮಟ್ಟದ ಅಧಿಕಾರಿಗಳು ಅರ್ಜಿಯನ್ನು ಪರಿಶೀಲಿಸಿದ ನಂತರ ಫಲಾನುಭವಿಗಳ ಜೇಷ್ಠತಾ ಪಟ್ಟಿಯನ್ನು ತಯಾರಿಸಿ, ಹಿರಿಯ ಸಹಾಯಕ ತೋಟಗಾರಿಕೆ ಅಧಿಕಾರಿಗಳ ಶಿಫಾರಸ್ಸಿನೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು.
   d. ಜಿಲ್ಲೆಗೆ ನಿಗಧಿಪಡಿಸಿರುವ ಘಟಕ ಮತ್ತು ಆರ್ಥಿಕ ಗುರಿಗಳನ್ನು ಜಿಲ್ಲಾ ಸಮಿತಿ ಅನುಮತಿ / ಗಮನಕ್ಕೆ ತಂದು, ಜಿಲ್ಲಾ ಸಮಿತಿ ಮುಖಾಂತರ ಜೇಷ್ಠತಾ ಪಟ್ಟಿಯನ್ನು ಆಧರಿಸಿ ಫಲಾನುಭವಿಯ ಆಯ್ಕೆ ಮಾಡುವುದು.
5. ತಾಲ್ಲೂಕು ಹಿಸತೋನಿ/ಸತೋನಿ ರವರು ಅರ್ಜಿ ಹಾಗೂ ಮೇಲ್ಕಂಡ ಸೌರಶಾಖ ಘಟಕ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿ 5 ದಿನಗಳ ಒಳಗಾಗಿ ಸಹಾಯಧನ ಅರ್ಜಿಯನ್ನು ತೋಉನಿ (ಜಿಪಂ) ರವರಿಗೆ ಎಲ್ಲಾ ದಾಖಲಾತಿಗಳ ಸಹಿತ ಕಳುಹಿಸುವುದು.

   ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ಜಿಲ್ಲೆಯ ಎಲ್ಲಾ ಹಿಸತೋನಿ/ಸತೋನಿ ರವರಿಂದ ಬಂದ ಅರ್ಜಿಗಳನ್ನು ಪರಿಶೀಲಿಸಿ ತಾಲ್ಲೂಕುವಾರು ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವುದು.

6. ಜಿಲ್ಲೆಯ ತೋಉನಿ (ಜಿಪಂ) ರವರು ಅರ್ಜಿಯನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅನುಮೋದಿತ ಕ್ರಿಯಾ ಯೋಜನೆ ಮಿತಿಯಲ್ಲಿ ಫಲಾನುಭವಿಗೆ Work Order/letter of intent ನ್ನು 5 ದಿನಗಳೊಳಗಾಗಿ ನೀಡುವುದು.

7. ತೋಉನಿ (ಜಿಪಂ) ರವರಿಂದ Work order/letter of intent ಪಡೆದ ನಂತರ, ಫಲಾನುಭವಿಯು ಇಲಾಖೆಯಿಂದ empanel ಆದ ಸಂಸ್ಥೆಯವರಿಂದ ಸೌರಶಾಖ ಘಟಕ ನಿರ್ಮಾಣ ಕೈಗೊಂಡು 45 ದಿನಗಳೊಳಗಾಗಿ ಪೂರ್ಣಗೊಳಿಸಬೇಕು.

8. ಅರ್ಜಿದಾರರು ಸೌರಶಾಖ ಘಟಕ ನಿರ್ಮಾಣ ಕಾರ್ಯದ ಹಂತದಲ್ಲಿ ಹಾಗೂ ಪೂರ್ಣಗೊಳಿಸಿದ ನಂತರ ಸಂಬಂಧಿಸಿದ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಫಲಾನುಭವಿಯೊಂದಿಗೆ ಘಟಕವನ್ನು ಪರಿಶೀಲಿಸಿ ಯೋಜನೆಯ ಅನುಷ್ಠಾನದ ಗುಣಮಟ್ಟ ಹಾಗೂ ಗುಣಮಟ್ಟದ ಸಾಮಗ್ರಿಗಳನ್ನು ಅಳವಡಿಸಿರುವ ಪ್ರಮಾಣ ಕುರಿತಂತೆ ತೃಪ್ತಿಕರವಾಗಿದ್ದಲ್ಲಿ, ಅನುಷ್ಠಾನದ ವಿವರ ಹಾಗೂ ಫಲಾನುಭವಿಗಳ ಸಮೇತ ಛಾಯಾಚಿತ್ರ ಹಾಗೂ ವರದಿಯನ್ನು ಸತೋಅ (RSK) ಹಾಗೂ ಹಿಸತೋನಿ ದೃಢೀಕರಣದೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರಿಗೆ ಸಲ್ಲಿಸುವುದು. (5 ದಿನಗಳೊಳಗಾಗಿ).

9. ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಕಡ್ಡಾಯವಾಗಿ (ಶೇ.100 ರಷ್ಟು) ಘಟಕಗಳ ಪರಿಶೀಲನೆ ನಡೆಸಬೇಕು. ಸತೋಅ (RSK) ರವರು ಪರಿಶೀಲಿಸಿದ ಘಟಕಗಳ ಪೈಕಿ ಕನಿಷ್ಠ ಶೇ.50 ರಷ್ಟು ತಾಕುಗಳನ್ನು ತಾಲ್ಲೂಕು ಸತೋನಿ/ಹಿಸತೋನಿ ರವರು ಪರಿಶೀಲಿಸಬೇಕು. ಸತೋಅ (RSK) ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರು ನ್ಯೂನತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡುವುದು.

**10. ಜಿಲ್ಲೆಯ ತೋಉನಿ (ಜಿಪಂ) ರವರು ಶೇ.10 ರಷ್ಟು ಘಟಕಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಅದರಲ್ಲಿ ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಶೇ. 5 ರಷ್ಟು ಘಟಕಗಳನ್ನು ಹಾಗೂ ಸತೋಅ ರವರು ಪರಿಶೀಲಿಸಿರುವ ಶೇ. 5 ರಷ್ಟು ಘಟಕಗಳನ್ನು ಮರುಪರಿಶೀಲನೆ ಮಾಡುವುದು.**

11. ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಹಿಸತೋನಿ / ಸತೋನಿ ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು.

**12. ವಿಭಾಗೀಯ ಜಂಟಿ ನಿರ್ದೇಶಕರು ರವರು ಶೇ. 5 ರಷ್ಟು ಘಟಕಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಅದರಲ್ಲಿ ತೋಉನಿ (ಜಿಪಂ) ರವರು ಪರಿಶೀಲಿಸಿರುವ ಶೇ. 2 ರಷ್ಟು ಘಟಕಗಳನ್ನು ಹಾಗೂ ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಶೇ. 3 ರಷ್ಟು ಘಟಕಗಳನ್ನು ಮರುಪರಿಶೀಲನೆ ಮಾಡುವುದು.**

**13. ಅಪರ ನಿರ್ದೇಶಕರು/ ಜಂಟಿ ನಿರ್ದೇಶಕರು ರವರು ಶೇ.1 ರಷ್ಟು ಘಟಕಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಅದರಲ್ಲಿ ವಿಭಾಗೀಯ ಜಂಟಿ ನಿರ್ದೇಶಕರು ಪರಿಶೀಲಿಸಿರುವ ಶೇ.0.5 ರಷ್ಟು ಘಟಕಗಳನ್ನು ಹಾಗೂ ತೋಉನಿ (ಜಿಪಂ) ರವರು ಪರಿಶೀಲಿಸಿರುವ ಶೇ.0.5 ರಷ್ಟು ಘಟಕಗಳನ್ನು ಮರುಪರಿಶೀಲನೆ ಮಾಡುವುದು.**

14. ಮೇಲಿನ ಎಲ್ಲಾ ಅಧಿಕಾರಿಗಳು ತಮ್ಮ ಸ್ಥಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಛಾಯಾಚಿತ್ರಗಳನ್ನು ತೆಗೆದು ದಾಖಲಿಸುವುದು.

15. ಪ್ರಸ್ತಾವನೆಯೊಂದಿಗೆ ಸಲ್ಲಿಸುವ ಎಲ್ಲಾ ದಾಖಲಾತಿ ಪತ್ರಗಳಿಗೆ ಆಯಾ ರೈತ ಸಂಪರ್ಕ ಕೇಂದ್ರದ ಸ.ತೋ.ಅ. ಮತ್ತು ತಾಲ್ಲೂಕಿನ ಹಿ.ಸ.ತೋ.ನಿ. / ಸ.ತೋ.ನಿ ರವರು ಕಡ್ಡಾಯವಾಗಿ ದಿನಾಂಕದೊಂದಿಗೆ ದೃಢೀಕರಣ ಮಾಡಬೇಕು.
16. ರೈತರು ಸೌರಶಾಖಾ ಘಟಕವನ್ನು ಮಾರ್ಗಸೂಚಿ ಮತ್ತು ಅಂದಾಜು ಪಟ್ಟಿಯಂತೆ ನಿರ್ಮಿಸಿರುವ ಬಗ್ಗೆ ಪರಿಶೀಲಿಸಬೇಕು.

**ಸಹಾಯಧನ ವಿತರಣೆ:**

ಜಿಲ್ಲೆಯ ತೋಉನಿ (ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ಸೌರಶಾಖಾ ಘಟಕ ಅನುಷ್ಠಾನದ ವರದಿಯನ್ನು ಪರಿಶೀಲಿಸಿದ ನಂತರ ಕೆಲಸವು ತೃಪ್ತಿಕರವಾಗಿದ್ದಲ್ಲಿ ಮಾತ್ರ ಸಹಾಯಧನದ ಮೊತ್ತವನ್ನು ಈ ಕೆಳಕಂಡ ವಿಧಾನಗಳನ್ನು ಪಾಲಿಸಿ ಬಿಡುಗಡೆ ಮಾಡುವುದು.

1) ಸೌರಶಾಖಾ ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಅಧಿಕಾರಿ ಹಾಗೂ ತಾಲ್ಲೂಕು ಅಧಿಕಾರಿಯವರು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ ಖಚಿತಪಡಿಸಿಕೊಳ್ಳುವುದು ಹಾಗೂ ಪೂರ್ಣಗೊಂಡಿರುವ ಘಟಕದ GPS ಛಾಯಾಚಿತ್ರಗಳನ್ನು ಕಡ್ಡಾಯವಾಗಿ ಪಡೆದುಕೊಂಡ ನಂತರವೇ ಅಂತಿಮವಾಗಿ ಸಹಾಯಧನ ಬಿಡುಗಡೆ ಮಾಡುವುದು.
2) ಫಲಾನುಭವಿಯು ಸಹಾಯಧನ ಪಡೆದಿರುವ ಬಗ್ಗೆ ಸೌರಶಾಖಾ ಘಟಕದ ಮುಂಭಾಗದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಲೋಗೋ (LOGO) ದೊಂದಿಗೆ ಸಂಕ್ಷಿಪ್ತ ವಿವರಗಳುಳ್ಳ ನಾಮಫಲಕವನ್ನು ಕಡ್ಡಾಯವಾಗಿ ಅಳವಡಿಸುವುದು.
3) ಫಲಾನುಭವಿಯು ಬ್ಯಾಂಕಿನಿಂದ ಸಾಲ ಪಡೆದಿದ್ದಲ್ಲಿ ಬ್ಯಾಂಕ್ ಸಾಲದ ಜೊತೆಗೆ ಜಮಾ ಆಗುವಂತೆ ಅಥವಾ ಫಲಾನುಭವಿಯ ಉಳಿತಾಯ ಖಾತೆಗೆ ಮಾರ್ಗಸೂಚಿಗಳನ್ನು ಪಾಲಿಸಿ ಸಹಾಯಧನವನ್ನು ಜಮಾ ಮಾಡುವುದು.

## Reporting and documentation (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು)

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇ-ಮೇಲ್ ಮೂಲಕ ತಿಂಗಳ 2ನೇ ದಿನಾಂಕದ ಒಳಗಾಗಿ ತಪ್ಪದೇ KSHMA ಕಛೇರಿಗೆ ಸಲ್ಲಿಸುವುದು.
2. **ವಾರ್ಷಿಕ ಬಿಡುಗಡೆಯಾಗಿರುವ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಕ್ರಮಕೈಗೊಳ್ಳುವುದು. ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಸಾಧ್ಯವಾಗದಿದ್ದಲ್ಲಿ 3ನೇ ತ್ರೈಮಾಸಿಕದ (3rd trimester) ಒಳಗಾಗಿ ಅನುದಾನದ ಬೇಡಿಕೆಯನ್ವಯ ಅಂತರ ಘಟಕಗಳಲ್ಲಿ ಮಾರ್ಪಾಡುಗಳನ್ನು ನಿರ್ದೇಶನಾಲಯದಿಂದ ಅನುಮೋದನೆ ಪಡೆಯುವುದು. ತದನಂತರ ಯಾವುದೇ ಮಾರ್ಪಾಡುಗಳನ್ನು ಪರಿಗಣಿಸಲಾಗುವುದಿಲ್ಲ.**
3. ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ಕಾರ್ಯನಿರ್ವಾಹಕ ನಿರ್ದೇಶಕರು, KSHMA ಮತ್ತು ತೋಟಗಾರಿಕೆ ಮಾಹಿತಿ ಕೇಂದ್ರ ರವರಿಗೆ ಕಳುಹಿಸುವುದು.

4. 2022-23 ನೇ ಸಾಲಿನ ಮಾರ್ಚ್ ಮಾಹೆಯ ಅಂತ್ಯಕ್ಕೆ ಫಲಾನುಭವಿಗಳ ವಿವರವನ್ನು ಕಡ್ಡಾಯವಾಗಿ KSHMA ಕಛೇರಿಗೆ ಕಳುಹಿಸುವುದು.

ಮುಂದಿನ ಆದೇಶ ಬರುವವರೆಗೂ ಈ ಮಾರ್ಗಸೂಚಿ ಚಾಲ್ತಿಯಲ್ಲಿರುತ್ತದೆ.

ಮಿಷನ್ ನಿರ್ದೇಶಕರು

ಹಾಗೂ

ತೋಟಗಾರಿಕೆ ನಿರ್ದೇಶಕರು